ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳು, ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ: ಸಿ7(4) ಪ್ರಾ.ಶಿ.ಅ/ಭಾಷಾ ನೀತಿ 286/2015-16 ದಿನಾಂಕ: 31-12-2015

**-:ಜ್ಞಾ ಪ ನಾ:-**

**ವಿಷಯ** : ಘನ ಸರ್ವೋಚ್ಚ ನ್ಯಾಯಾಲಯದ ಹಾಗೂ ರಾಜ್ಯ ಉಚ್ಚ ನ್ಯಾಯಾಲಯದ ತೀರ್ಪಿನನ್ವಯ, ಖಾಸಗಿ ಅನುದಾನರಹಿತ ಕನ್ನಡ ಮಾಧ್ಯಮದ ಅಥವಾ ಮಾತೃ ಭಾಷೆಯಲ್ಲಿ ಅನುಮತಿ ಪಡೆದು ಪ್ರಸ್ತುತ ಆಂಗ್ಲ ಮಾಧ್ಯಮಕ್ಕೆ ಪರಿವರ್ತನೆ ಕೋರಿದ್ದ ಪ್ರಕರಣಗಳಲ್ಲಿ, **ಬೆಂಗಳೂರು ಉತ್ತರ,** ಜಿಲ್ಲೆಗೆ ಸಂಬಂಧಪಟ್ಟಂತೆ, 2015-16 ನೇ ಸಾಲಿನಿಂದ 1-5 ನೇ ತರಗತಿ ಆಂಗ್ಲ ಮಾಧ್ಯಮ ಬೋಧನೆಗೆ ಪರಿವರ್ತನೆ ನೀಡುವ ಬಗ್ಗೆ.

**ಉಲ್ಲೇಖ:**
1. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ರಾಜ್ಯ ಸರ್ಕಾರವು ಸಲ್ಲಿಸಿದ್ದ ಎಸ್.ಎಲ್.ಪಿ. 18139-18163/2008 ಅನ್ನು ಸಿವಿಲ್ ಅಪೀಲ್ ಎಂದು ಪರಿಗಣಿಸಿ ಸಂವಿಧಾನ ಪೀಠಕ್ಕೆ ವರ್ಗಾವಣೆಗೊಂಡ ತರುವಾಯದಲ್ಲಿ ದಿ: 06-05-2014 ರಲ್ಲಿ ಹೊರಟಿರುವ ತೀರ್ಪು.
2. ದಿ: 06.05.2014 ರ ತೀರ್ಪಿನ ಕುರಿತು ಸಲ್ಲಿಸಲಾಗಿದ್ದ ಮರು ಪರಿಶೀಲನಾ ಅರ್ಜಿ ಸಂಖ್ಯೆ: 1878-1911/2014 ರಲ್ಲಿ ದಿ: 09.09.2014 ರಂದು ವಜಾ ಆದೇಶ. ನಂತರದಲ್ಲಿ ರಾಜ್ಯ ಸರ್ಕಾರ ದಾಖಲಿಸಿದ್ದ ಪರಿಹಾರಾತ್ಮಕ ಅರ್ಜಿಯ (Curative Petition) ಆದೇಶ.
3. ಸರ್ಕಾರದ ಅರೆ ಸ.ಪ.ಇಡಿ.263.ಪಿಜಿಸಿ.2015, ದಿನಾಂಕ:2-6-2015.
4. ಈ ಕಛೇರಿ ಏಕಕಡತ ಸಂಖ್ಯೆ: ಸಿ7(3)ಪ್ರಾ.ಶಿ.ಅ/ಭಾಷಾನೀತಿ 19/2014-15ರಲ್ಲಿನ ಸರ್ಕಾರದ ಆದೇಶ ದಿನಾಂಕ: 06-6-2015.
5. ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ.359.ಪಿಜಿಸಿ.2015, ದಿನಾಂಕ:5-9-2015.
6. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಇವರ ಪ್ರಸ್ತಾವನೆಯ ದಿನಾಂಕ: 31-12-2015

***********

1994-95 ರಲ್ಲಿ ಜಾರಿಗೊಳಿಸಲಾದ ಭಾಷಾ ನೀತಿ ಕುರಿತಂತೆ ಹಲವು ಸಂಸ್ಥೆಗಳು ಮೊದಲಿಗೆ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿದ ರಿಟ್ ಅರ್ಜಿಯಲ್ಲಿ 2008ರಲ್ಲಿ ತೀರ್ಪು ಹೊರಬಿದ್ದು ನಂತರ ಸರ್ಕಾರವು ಘನ ಸರ್ವೋಚ್ಛ ನ್ಯಾಯಾಲಯದಲ್ಲಿ ವಿಶೇಷ ರಜಾ ಅರ್ಜಿಯನ್ನು ದಾಖಲಿಸಿ ಅಂತಿಮವಾಗಿ ದಿನಾಂಕ : 06-05-2014 ರಲ್ಲಿ ಘನ ಸರ್ವೋಚ್ಛ ನ್ಯಾಯಾಲಯದ ಸಂವಿಧಾನದ ಪೀಠವು ತೀರ್ಪು ನೀಡಿದ ಮತ್ತು ಕರ್ನಾಟಕ ರಾಜ್ಯ ಘನ ಉಚ್ಚ ನ್ಯಾಯಾಲಯ ಕೆಲವು ಪ್ರಕರಣಗಳಲ್ಲಿ, ನಿಂದನಾ ದಾವೆಯು ಸೇರಿದಂತೆ ಸರ್ವೋಚ್ಛ ನ್ಯಾಯಾಲಯದ ಆದೇಶವನ್ನು ಅನುಷ್ಠಾನಗೊಳಿಸುವಂತೆ ಆದೇಶಿಸಿದೆ. ಈ ಹಿನ್ನೆಲೆಯಲ್ಲಿ 01 ರಿಂದ 5ನೇ ತರಗತಿಗೆ ಆಂಗ್ಲ ಮಾಧ್ಯಮದ ಪರಿವರ್ತನೆಗೆ ಸರ್ಕಾರವು ಉಲ್ಲೇಖ-3 ಮತ್ತು 4, 5 ರಲ್ಲಿ ಅನುಮತಿ ನೀಡಿರುತ್ತದೆ.

ಉಲ್ಲೇಖ-6 ರಲ್ಲಿ ಉಪನಿರ್ದೇಶಕರು **ಬೆಂಗಳೂರು ಉತ್ತರ ಜಿಲ್ಲೆ** ಇವರಿಂದ ಸಲ್ಲಿಕೆಯಾಗಿರುವ ಪ್ರಸ್ತಾವನೆಗಳಲ್ಲಿ ಸದರಿ ಶಾಲೆಗಳು 01 ರಿಂದ 5ನೇ ತರಗತಿಯವರೆಗೆ ಶಾಲೆಯು ಪ್ರಾರಂಭವಾದಾಗಿನಿಂದ ನಿರಂತರವಾಗಿ ನಡೆಯುತ್ತಿದ್ದು, ಕನ್ನಡ ಮಾಧ್ಯಮದಿಂದ ಆಂಗ್ಲ ಮಾಧ್ಯಮಕ್ಕೆ ಪರಿವರ್ತನೆ ನೀಡಬಹುದೆಂದು ಉಪ ನಿರ್ದೇಶಕರು ಅಭಿಪ್ರಾಯ ನೀಡಿದ್ದಾರೆ. ಸದರಿಯವರ ಅಭಿಪ್ರಾಯ ಮತ್ತು ಉಲ್ಲೇಖದಲ್ಲಿನ ಸರ್ಕಾರದ ಆದೇಶಗಳಂತೆ, ಕೆಳಕಂಡ **ಶಾಲೆಗೆ**

2015–16ನೇ ಶೈಕ್ಷಣಿಕ ಸಾಲಿನಿಂದ 01 ರಿಂದ 5ನೇ ತರಗತಿಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ ಬೋಧಿಸಲು ಕೆಳಗಿನ ಷರತ್ತುಗಳಿಗೊಳಪಟ್ಟು ಅನುಮತಿ ನೀಡಿ ಆದೇಶಿಸಿದೆ.

1. ಎಲ್ಲಾ ಸಂಸ್ಥೆಗಳಿಂದ ಕರ್ನಾಟಕ ಶಿಕ್ಷಣ ಕಾಯ್ದೆ ನಿಯಮಾವಳಿಗಳನ್ವಯ ನಮೂನೆ–3 ರಲ್ಲಿ ಅಗತ್ಯ ವಿವರಗಳನ್ನು ನಮೂದಿಸಿ 01 ರಿಂದ 5ನೇ ತರಗತಿ ಕನ್ನಡ ಮಾಧ್ಯಮದ ತರಗತಿಗಳನ್ನು ನಡೆಸಲು ವಿತರಿಸಲಾಗಿದ್ದ ಮೂಲ ನೋಂದಣಿ ಪ್ರಮಾಣ ಪತ್ರವನ್ನು ಉಪನಿರ್ದೇಶಕರು 15 ದಿನಗಳೊಳಗೆ ಪಡೆದು ಸಲ್ಲಿಸಿದ ನಂತರದಲ್ಲಿ ನಮೂನೆ–4 ರಲ್ಲಿ ಆಂಗ್ಲ ಮಾಧ್ಯಮಕ್ಕೆ ಪರಿಷ್ಕೃತ ನೋಂದಣಿ ಪ್ರಮಾಣ ಪತ್ರವನ್ನು ವಿತರಿಸಲಾಗುವುದು.
2. ಕ್ಷೇತ್ರ ಶಿಕ್ಷಣಾಧಿಕಾರಿಗಳು/ ಉಪನಿರ್ದೇಶಕರು ಶಿಫಾರಸ್ಸು ಮಾಡಿ ದೃಢೀಕರಿಸಿ ಸಲ್ಲಿಸಿರುವ ವರದಿ ಮತ್ತು ದಾಖಲೆಗಳ ಆಧಾರದ ಮೇಲೆ ಅನುಮತಿಯನ್ನು ನೀಡಲಾಗಿದೆ.
3. ಕರ್ನಾಟಕ ಶಿಕ್ಷಣ ಕಾಯ್ದೆ ನಿಯಮಾವಳಿಗಳು ಹಾಗೂ ಕಾಲದಿಂದ ಕಾಲಕ್ಕೆ ಹೊರಡಿಸಲಾಗಿರುವ ಆದೇಶ/ ಸುತ್ತೋಲೆಗಳಂತೆ ಕ್ರಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
4. ಕಡ್ಡಾಯ ಶಿಕ್ಷಣ ಕಾಯ್ದೆ ನಿಯಮಗಳು ಜಾರಿಯಲ್ಲಿದೆ. ಅದರಂತೆ ಅಗತ್ಯವಿರುವ ಎಲ್ಲಾ ಸೌಲಭ್ಯಗಳನ್ನು ಹಾಗೂ ಗುಣಾತ್ಮಕ ಶಿಕ್ಷಣವನ್ನು ಒದಗಿಸತಕ್ಕದ್ದು.
5. ಜಾರಿಯಲ್ಲಿರುವ ಶುಲ್ಕದ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
6. ಮೂಲಭೂತ ಸೌಲಭ್ಯಗಳ ಕೊರತೆಯನ್ನು ಸಂಸ್ಥೆಯು ಮುಂದಿನ ದಿನಗಳಲ್ಲಿ ಸರಿಪಡಿಸಿಕೊಳ್ಳತಕ್ಕದ್ದ ಹಾಗೂ ಮೂಲಭೂತ ಸೌಲಭ್ಯಗಳ ಬಗ್ಗೆ ಪರಿಶೀಲಿಸಲಾಗುವುದು.
7. ಸಂಸ್ಥೆಯ ಯಾವುದೇ ದಾಖಲೆಗಳ ನೈಜತೆಯ ಬಗ್ಗೆ ವ್ಯತಿರಿಕ್ತ ವರದಿ ಸಲ್ಲಿಕೆಯಾದ ಪ್ರಸಂಗದಲ್ಲಿ ತಪ್ಪು ಮಾಹಿತಿ ಸಲ್ಲಿಕೆಯಾಗಿರುವುದು ಗಮನಕ್ಕೆ ಬಂದಲ್ಲಿ, ತಕ್ಷಣವೆ ಏಕಪಕ್ಷೀಯವಾಗಿ ಹಾಗೂ ಯಾವುದೇ ಸಮಜಾಯಿಷಿಗೆ ಅವಕಾಶ ನೀಡದೇ ಪ್ರಸ್ತುತ ಅನುಮತಿಯನ್ನು ಹಿಂಪಡೆಯುವ ಅಧಿಕಾರವನ್ನು ಕಾಯ್ದಿರಿಸಿಕೊಳ್ಳಲಾಗಿದೆ.
8. ಉಪ ನಿರ್ದೇಶಕರು ಪರಿವರ್ತನೆಯನ್ನು ಪರಿಗಣಿಸಿ ಅಗತ್ಯ ಕ್ರಮಗಳನ್ನು ನಿಯಮಾನುಸಾರ ಕೈಗೊಳ್ಳತಕ್ಕದ್ದು.

| ಕ್ರಸಂ. | ಸಂಸ್ಥೆಯ ಹೆಸರು |
|---|---|
| 1 | ವಿಶ್ವ ಮಾನವ ವಿದ್ಯಾ ಸಂಸ್ಥೆ, ಕೊಡಿಗೇಹಳ್ಳಿ, ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಉತ್ತರ ವಲಯ–1, ಬೆಂಗಳೂರು. |

31/12/15
(ಕೆ.ಎಸ್.ಸತ್ಯಮೂರ್ತಿ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಗೆ,

1. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಕೆ.ಜಿ.ರಸ್ತೆ, ಬೆಂಗಳೂರು.
2. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ,
3. ಸಂಬಂಧಿಸಿದ ಸಂಸ್ಥೆಗಳ ಕಾರ್ಯದರ್ಶಿಗಳಿಗೆ,
4. ಹಿರಿಯ ಸಹಾಯಕ ನಿರ್ದೇಶಕರು ಇ–ಆಡಳಿತ ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರು ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕ್ರಮ ವಹಿಸುವುದು.
5. ಕಛೇರಿ ಪ್ರತಿ.